ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1983
ಸದಸ್ಯರ ಹೆಸರು	:	ಶ್ರೀ ಕೆ.ಹರೀಶ್ ಕುಮಾರ್ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	16.03.2022
ಉತ್ತರಿಸುವ ಸಚಿವರು	:	ಕಂದಾಯ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಸಂಘದ 33 ಸೆಂಟ್ಸ್ ಸ್ಥಳ ಮಂಗಳೂರು ಅತ್ತಾವರ ಗ್ರಾಮದ ಸರ್ವೆ ನಂ.278/2ಬಿ ಯಲ್ಲಿದ್ದು, 1938 ರಿಂದ B.P.Mis 1216 ದಿನಾಂಕ 28/04/1938 ರಂತೆ ಲೈಸೆನ್ಸ್ ಪಾವತಿಸಿ ಸ್ಥಳವನ್ನು ಸಂಘದ ಸ್ವಾಧೀನದಲ್ಲಿ ಇರಿಸಿಕೊಂಡ ಬಗ್ಗೆ ಹಾಗೂ ವಿಭಾಗೀಯ ಆಯುಕ್ತರು ಮೈಸೂರು ಇವರ ಪತ್ರ A6PR24/56-57 ದಿನಾಂಕ 17/12/1956 ರಂತೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಹೆಸರಿಗೆ ಮಂಜೂರಾಗಿರುವ ಬಗ್ಗೆ ಮೈಸೂರು ಸರ್ಕಾರದ ಆದೇಶ ಸಂಖ್ಯೆ: RD40LGU57 ದಿನಾಂಕ 09/09/1957 ರಲ್ಲಿ ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಸಂಘಕ್ಕೆ ಮಂಗಳೂರು ತಾಲ್ಲೂಕು ಅತ್ತಾವರ ಗ್ರಾಮದ ಸ.ನಂ. 278/2ಬಿ ರಲ್ಲಿ 0.33 ಎಕರೆ ಜಮೀನು ಮೈಸೂರು ವಿಭಾಗೀಯ ಆಯುಕ್ತರು ಇವರ ಆದೇಶದಂತೆ ಮಂಜೂರಾಗಿರುವ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ.
ಆ)	ಸದರಿ ಆದೇಶವು ಕಂದಾಯ ಇಲಾಖೆಯಲ್ಲಿ ಇದ್ದರೂ ಸಹಾಯಕ ಆಯುಕ್ತರು ಹಾಗೂ ಉಪ ವಿಭಾಗ ದಂಡಾಧಿಕಾರಿ ಮಂಗಳೂರು ಇವರು LND/PDR/117/2018-19 ದಿನಾಂಕ 30/11/2021 ರಲ್ಲಿ ಮಂಜೂರಾತಿ ಆದೇಶವನ್ನು ರದ್ದುಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಯಾವುದೇ ಮಂಜೂರಾತಿ ಆದೇಶ ಇಲ್ಲದಿರುವುದರಿಂದ ಸಹಾಯಕ ಆಯುಕ್ತರು, ಹಾಗೂ ಉಪ ವಿಭಾಗ ದಂಡಾಧಿಕಾರಿ, ಮಂಗಳೂರು ಇವರು ನಡವಳಿ ಸಂಖ್ಯೆ: ಎಲ್‌ಎನ್‌ಡಿ.ಪಿಡಿಆರ್.117/2018-19 ದಿನಾಂಕ 30.11.2021 ರಂತೆ ಪಹಣಿಯ ಕಾಲಂ 9 ರಲ್ಲಿ 'ಸರ್ಕಾರ' ಎಂದು ದಾಖಲಿಸಲಾಗಿದೆ.
ಇ)	ಬಂದಿದ್ದಲ್ಲಿ, ಪುನರ್ ಪರಿಶೀಲಿಸಿ ಮಂಜೂರಾತಿಗೆ ಸರ್ಕಾರವು ಕ್ರಮಕೈಗೊಳ್ಳುವುದೇ?	ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

(ಕಡತ ಸಂಖ್ಯೆ:ಕಂಇ 38 ಎಲ್‌ಜಿಎ 2022)

(ಆರ್.ಅಶೋಕ)
ಕಂದಾಯ ಸಚಿವರು.